2. Notification No. HD 69 CNA 91 dated 14th March 1991, Regarding filing an application in form "AA" upto 1-6-87 for the purpose of conversion of Touring Cinema into Semi-permanent by Sri JN Nagaraja, Proprietor, Sri Nagaraja Touring Talkies, Jangama Kote, Siddlaghatta, Taluk, Kolar District.

3. Order No. HD 264 CNA 89 dated 14th March 1991, Regarding Sereening of 15 mm Children films in the Auditorium of Jawahar Bal Bhavan, Mysore.

as required under Section 20 of the Karnataka Cinemas (Regulation) Act, 1964.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ಅರ್ಜಿಗಳನ್ನು ಒಪ್ಪಿಸುವುದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಮೀನುಗಾರಿಕಾ ಬಂದರಿನ ನಿರ್ಮಾಣದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಅರ್ಜಿಗಳನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ.

ಅ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯಲ್ಲಿ ನದಿಗೆ ತಡೆಗೋಡೆಯನ್ನು ಕಟ್ಟುವ ಬಗ್ಗೆ.

ಆ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯ ರಸ್ತೆಗಳ ಅಭಿವೃದ್ಧಿಯ ಬಗ್ಗೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಎರಡನೆಯ ಹಾಗೂ ಮೂರನೆಯ (9ನೇ ವಿಧಾನಸಭೆ) ವರದಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನು ಒಪ್ಪಿಸಲಾಯಿತು. ಈಗ ನಿಯಮ 334ರ ಕೆಳಗೆ ಚರ್ಚೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಚುನಾವಣೆ ಸಮಯದಲ್ಲಿ ಅಧಿಕಾರಿಗಳ ವರ್ಗಾವರ್ಗಿ

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ [illegible] : ಮಾನ್ಯ ಅಧ್ಯಕ್ಷರೇ, ಈಗ ಹೆಚ್ಚೂ ಕಡಿಮೆ ಲೋಕಸಭೆ ಚುನಾವಣೆ ಅಪೋಷಿತವಾಗಿಯಾದರೂ ಘೋಷಣೆಯಾಗಿದೆ. ತಾರೀಖನ್ನು ನಿಗದಿ ಮಾಡಬೇಕು. ಚುನಾವಣಾ ಆಯೋಗದವರು ಸರಕಾರಗಳನ್ನು ನಡೆಸತಕ್ಕಂತಹ ವಿವಿಧ ರಾಜಕೀಯ ಪಕ್ಷಗಳಿಗೂ ಮತ್ತು ಸರಕಾರಗಳಿಗೂ ಒಂದು ಸುತ್ತೋಲೇಯನ್ನು ಕಳಿಸಿ 25ನೇ ತಾರೀಖು ಅಥವಾ ಅದು ಕಳೆದ ಮೇಲೇ ಯಾವ ವರ್ಗಾವರ್ಗಿಗಳನ್ನೂ ಮಾಡಬಾರದೆಂದು ನಿರ್ದೇಶನವನ್ನು ಕೊಟ್ಟಿದ್ದಾರೆ.